ಶೆಟ್ರ ತಾಯಿಗೆ ಹೀಗೇ ಆಗಿತ್ತು. ನನ್ನ ಮಾತು ಕೇಳ್ದೆ ಆಸ್ಪತ್ರೆಗೆ ಸೇರ್ಸೋಕ್ಕೆ ತಡ ಮಾಡಿದ್ರು. ಅಲ್ಲಿ ತಲಪೋ ಹೊತ್ಗೆ ಎಲ್ಲಾ ಆಗ್ಹೋಗಿತ್ತು. ಮೊದ್ಲೇ ಕರ್ಕೊಂಡು ಬರೋಕ್ಕೆ ನಿಮಗೇನಾಗಿತ್ತು ಅಂತ ಡಾಕ್ಟ್ರು ಶೆಟ್ರಿಗೆ ಚೆನ್ನಾಗಿ ಉಗಿದ್ರಂತೆ. ನಾವೂ ಅದೇ ತಪ್ಪು ಮಾಡೋದು ಬೇಡ. ನಾನು ಆಂಬುಲೆನ್ಸ್ ತರಸ್ತೀನಿ. ರಮೇಶಣ್ಣಂಗೆ ವಾಗ್ದೇವಿ ಅಕ್ಕಂಗೆ ಕೂಡಲೇ ಹೊರಟುಬರೋಕ್ಕೆ ಫೋನ್ ಮಾಡಿ'' ಎಂದು ತಾನು ಕಾರ್ಯೋನ್ಮುಖನಾದ. ಹರಿ ಅದರಂತೆ ತಮ್ಮ ತಂಗಿಗೆ ಫೋನ್ ಮಾಡಿದರೆ ವಾಣಿ ಇತರೇ ಬಳಗದವರಿಗೆ ತಿಳಿಸಿದಳು.

ಆಂಬುಲೆನ್ಸ್ ಮನೆಯ ಮುಂದೆ ಬಂದು ನಿಂತೊಡನೆ ಸುತ್ತಮುತ್ತಲ ಮನೆಯವರೆಲ್ಲಾ ''ಅಜ್ಜಿಗೆ ಏನಾಯ್ತು?'' ಎನ್ನುತ್ತಾ ಬಂದು ನೆರೆದರು.

''ಅಯ್ಯೋ ಪಾಪ. ಬಲು ಒಳ್ಳೆಯ ಅಜ್ಜಮ್ಮ. ಎಲ್ರನ್ನೂ ಬಲು ವಿಶ್ವಾಸದಿಂದ ಮಾತನಾಡ್ಸೋವ್ರು.''

''ನೀವೇನೇ ಹೇಳಿ. ಆಕೆ ಪುಣ್ಯವಂತೆ. ಮಗ ಸೊಸೆ ಚೆನ್ನಾಗಿ ನೋಡ್ಕೊಂಡ್ರು. ಎಷ್ಟು ಜನಕ್ಕೆ ಇಂತಹ ಭಾಗ್ಯ ಇರುತ್ತೆ ಹೇಳಿ. ನಂಗೂ ಇದ್ದಾಳೆ ಸೊಸೆ ಅನ್ನೋ ಪುಣ್ಯಾತ್ಗಿತ್ತಿ. ಪ್ರಾಣ ಹೋಗ್ತಿದೆ ಅಂದ್ರೂಒಂದು ಲೋಟ ನೀರು ತಂದ್ಕೊಡೋಲ್ಲ.''

''ನಮ್ಮ ಏರಿಯಾಗೇ ಹಿರೀಜೀವ. ಏನಾದ್ರೂ ಹಬ್ಬ ಹುಣ್ಣಿಮೆ ಅಂತಂದ್ರೆ ಬಂದು ಅವರಿಗೆ ನಮಸ್ಕಾರ ಮಾಡ್ಲಿದ್ರೆ ಏನೋ ಕಳ್ಕೊಂಡಂತೆ ಆಗ್ತಿತ್ತು.''

''ಉಸಿರಾಟಕ್ಕೆ ತೊಂದ್ರೆ ಅಂತಂದ್ರೆ ಏನೂ ಆಗ್ಬಹುದು. ಹೃದಯ ನಿಲ್ಲೋಕ್ಕೆ ಮುಂಚೆ ಹಲವರಿಗೆ ಹೀಗಾಗತ್ತಂತೆ.''

''ತಡ ಮಾಡ್ಬೇಡಿ, ವಯಸ್ಸಾಗಿದೆ ನಿಜ. ಹಾಗಂತ ಸುಮ್ನಿರಕ್ಕೆ ಆಗುತ್ಯೇ? ನಮ್ಮ ಪ್ರಯತ್ನ ನಾವು ಮಾಡ್ಲೇ ಬೇಕಲ್ಲಾ.''

ಹೀಗೆ ಹಲವರ ಸಲಹೆ ಸಾಂತ್ವನದ ನಡುವೆ ಹಾದಿ ಮಾಡಿಕೊಂಡು ಆಂಬುಲೆನ್ಸ್ ಊಳಿಡುತ್ತಾ ವೇಗವಾಗಿ ಸಾಗಿತು.

★★★

ಎಮರ್ಜೆನ್ಸಿ ರೂಮಿನ ಹೊರಗೆ ಹಾಕಿದ್ದ ಬೆಂಚಿನಮೇಲೆ ಆತಂಕದ ಮೊಟ್ಟೆಗಳಾಗಿ ಹರಿ ಮತ್ತು ವಾಣಿ ಕುಳಿತಿದ್ದರೆ ಅಪ್ಪಣ್ಣ, ಕರ್ತವ್ಯ ಪಾಲನೆಯಲ್ಲಿ ನಿರತರಾಗಿದ್ದ ಜ್ಯೂನಿಯರ್ ಡಾಕ್ಟರ್, ನರ್ಸಮ್ಮಗಳ ಹಿಂದೆ ಮುಂದೆ ಸುತ್ತುತ್ತಾ ಅವರ ಕಾಲುಗಳಿಗೆ ತೊಡರುತ್ತಾ ಅಜ್ಜಿಯ ಸ್ಥಿತಿಯ ಬಗ್ಗೆ ಪದೆಪದೇ ಕೇಳುತ್ತಾ ಎಲ್ಲರಿಗೂ ಮುಜುಗರ ಉಂಟು ಮಾಡುತ್ತಿದ್ದ. ಎಷ್ಟೋ ಹೊತ್ತಿನ ಬಳಿಕ ಹೊರ ಬಂದ ದೊಡ್ಡ ಡಾಕ್ಟರು ಇವರಿಬ್ಬರನ್ನು ತಮ್ಮ ಕೋಣೆಗೆ ಕರೆದೊಯ್ದರು.

''ಯೋಚ್ನೆ ಮಾಡ್ಬೇಡಿ. ಜೀವಕ್ಕೆ ಅಪಾಯವಿಲ್ಲ. ಇನ್ನೊಂದು ಅರ್ಧ ಗಂಟೆ ಬಿಟ್ಟು ಮನೇಗೆ ಕರ್ಕೊಂಡು ಹೋಗಿ'' ಎಂದರು. ಆತಂಕದ ಮುದ್ದೆಯಾಗಿದ್ದ ಇವರಿಬ್ಬರಿಗೂ ಕುದಿಯುವ ನೀರಿನಿಂದ ಐಸ್ ನೀರಿಗೆ ಎತ್ತಿಹಾಕಿದ ಅನುಭವ. ''ಡಾಕ್ಟ್ರೇ, ಹುಶಾರಾಗಿದ್ದಾರೆ ಅಂತೀರಾ? ಅವರಿಗಿದ್ದ ಬ್ರೀಥಿಂಗ್ ಪ್ರಾಬ್ಲಂ ಗುಣವಾಯ್ತಾ? ಉಸಿರು ಬಿಟ್ಟಾಗ ಗೊರ್ ಗೊರ್ ಶಬ್ದ ಬರ್ತಿತ್ತು.''

''ಎಂತದ್ದೂ ಇಲ್ರೀ. ಭಾರಿ ನೆಗಡಿಯಾಗಿ ಮೂಗು ಕಟ್ಟಿ ಉಸಿರಾಡಲಾಗದೆ ಆ ಶಬ್ದ ಬಂದಿದೆ, ಅಷ್ಟೇ.''